# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 67(05) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.07.2024 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಅಧೀನದಲ್ಲಿ ಈ ಮೊದಲು ಸ್ಥಾಪಿತವಾಗಿದ್ದ ಸರ್ಕಾರಿ ವಿಜ್ಞಾನ ಕಾಲೇಜ್‌ನ್ನು ನೃಪತುಂಗಾ ವಿಶ್ವವಿದ್ಯಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, (Unitary University) ಈ ವಿಶ್ವವಿದ್ಯಾಲಯವನ್ನು ಅನುದಾನ ಆಯೋಗದ (University Grants Commission) (UGC) ನಿಯಮಾಗಳಂತೆ ಸ್ಥಾಪಿತವಾಗಿದೆಯೇ; | ಹೌದು<br><br>ಉನ್ನತ ಶಿಕ್ಷಣ ವಲಯಕ್ಕಾಗಿ ಅತ್ಯುತ್ತಮ ಮಹಾತ್ವಾಕಾಂಕ್ಷಿ ನಿಯೋಗ ಮಂಡಳಿ ಮತ್ತು ಸಮಗ್ರ ಯೋಜನೆಯಾಗಿರುವ ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ (RUSA)ದಡಿ, ರಾಜ್ಯಗಳುದ್ದಕ್ಕೂ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರಾದೇಶಿಕ ಹಂಚಿಕೆಯಲ್ಲಿನ ತೀವ್ರ ಅಂತರಗಳನ್ನು ಕಡಿಮೆಗೊಳಿಸುವುದನ್ನು ಪರಿಗಣಿಸಿ ನೃಪತುಂಗ ವಿಶ್ವವಿದ್ಯಾಲಯವನ್ನು ವಿಶ್ವವಿದ್ಯಾಲಯದ ಧನಸಹಾಯ ಆಯೋಗದ (University Grants Commission) ((UGC) ನಿಯಮಾವಳಿಗಳಂತೆ ಸ್ಥಾಪಿಸಲಾಗಿರುತ್ತದೆ. |
| (ಆ) | ವಿಶ್ವವಿದ್ಯಾಲಯದ ಅನುದಾನ ಆಯೋಗದ (UGC) ನಿಯಮಾಳಿಗಳಂತೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕಾದಲ್ಲಿ, ಸದರಿ ವಿಶ್ವವಿದ್ಯಾಲಯಕ್ಕೆ ಕನಿಷ್ಠ 25 ಎಕರೆ ಭೂಮಿ ಇರಬೇಕು; (ನಗರವ್ಯಾಪ್ತಿಯಲ್ಲಿದ್ದರೆ) ಆದರೆ ಸದರಿ ವಿಶ್ವವಿದ್ಯಾಲಯವು ಕೇವಲ 04 ಎಕರೆ ಭೂಮಿಯಲ್ಲಿ ಸ್ಥಾಪಿತವಾಗಿದ್ದು, ನಿಯಮಾವಳಿಗಳ ಉಲ್ಲಂಘನೆಯಾಗಿರುವುದಿಲ್ಲವೇ; ಆದ್ದಲ್ಲಿ (UGC) ನಿಯಮಾವಳಿಗಳನ್ನು ಉಲ್ಲಂಘಿಸಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು? | ನೃಪತುಂಗ ವಿಶ್ವವಿದ್ಯಾಲಯವು ಯಾವುದೇ ಸಂಯೋಜಿತ ಕಾಲೇಜುಗಳನ್ನು ಹೊಂದಿರುವುದಿಲ್ಲ. ಇದು ಏಕಾತ್ಮಕ ಸ್ವರೂಪದ (Unitary University) ವಿಶ್ವವಿದ್ಯಾಲಯವಾಗಿದೆ. ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಮತ್ತು ಬೆಂಗಳೂರು ಸರ್ಕಾರಿ ಕಲಾ ಕಾಲೇಜು ಬೆಂಗಳೂರು ಎಸ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು ಹಾಗೂ ಜಿಲ್ಲಾಧಿಕಾರಿ ಕಛೇರಿ, ಬೆಂಗಳೂರು ಈ ಎಲ್ಲಾ ಕಛೇರಿ/ಕಾಲೇಜುಗಳ ಹೆಸರಿನಲ್ಲಿ ಒಟ್ಟು 33 ಎಕರೆ ಜಮೀನಿದ್ದು, ಈ ಜಮೀನಿನ ಪೈಕಿ 10 ಎಕರೆ ಜಮೀನನ್ನು ನೃಪತುಂಗ ವಿಶ್ವವಿದ್ಯಾಲಯಕ್ಕೆ ಮೀಸಲಿರಿಸಲಾಗಿರುತ್ತದೆ. |

| | | |
|---|---|---|
| (ಇ) | ಸರ್ಕಾರಿ ವಿಜ್ಞಾನ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಗಾಗಿ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಕಟ್ಟಡ ಮಂಜೂರು ಮಾಡಲಾಗಿದ್ದು ಈ ಕಟ್ಟಡವನ್ನು ಸಮಾಜ ಕಲ್ಯಾಣ ಇಲಾಖೆಯು ಹಾಸ್ಟೆಲ್ ಕಟ್ಟಡವನ್ನು ವಿಶ್ವವಿದ್ಯಾಲಯವು ಹಿಂಪಡೆದುಕೊಳ್ಳಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? | ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಸರ್ಕಾರಿ ವಿಜ್ಞಾನ ಕಾಲೇಜು ಬಾಲಕರ ವಿದ್ಯಾರ್ಥಿನಿಲಯವನ್ನು ನೃಪತುಂಗ ವಿಶ್ವವಿದ್ಯಾಲಯಕ್ಕೆ ನೀಡುವಂತೆ, ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿತ್ತು. ಇದಕ್ಕೆ ಪ್ರತಿಯಾಗಿ ಸಮಾಜ ಕಲ್ಯಾಣ ಇಲಾಖೆಯು ಸದರಿ ವಿದ್ಯಾರ್ಥಿನಿಲಯ ಹಾಗೂ ಜಾಗವನ್ನು ಖರೀದಿಸಿ ಇಲ್ಲಿಯವರೆವಿಗೂ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಿಕೊಂಡು ಬರುತ್ತಿದ್ದು, ಸಮಾಜ ಕಲ್ಯಾಣ ಇಲಾಖೆಯ ಸ್ವತ್ತಾಗಿರುತ್ತದೆ. ಆದ್ದರಿಂದ, ಸರ್ಕಾರಿ ವಿಜ್ಞಾನ ಕಾಲೇಜು ಬಾಲಕರ ವಿದ್ಯಾರ್ಥಿನಿಲಯವನ್ನು ನೃಪತುಂಗ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. |

**ಸಂಖ್ಯೆ: ಇಡಿ/291/ಯುಆರ್ ಸಿ /2024**

(ಡಾ॥ ಎಂ.ಸಿ. ಸುಧಾಕರ್)
ಸಚಿವರು, ಉನ್ನತ ಶಿಕ್ಷಣ ಇಲಾಖೆ,

ಡಾ.ಎಂ.ಸಿ ಸುಧಾಕರ್ ಎಂ.ಡಿ.ಎಸ್
ಉನ್ನತ ಶಿಕ್ಷಣ ಸಚಿವರು